

# ವಸ್ತ್ರದಿಂದ ಒಡವೆ

## ಬೇಡ ಬಂಗಾರದ ಗೊಡವೆ

ಬಟ್ಟೆಯಿಂದ ತಯಾರಿಸಿದ ಒಡವೆಗಳು ಸಖತ್ ಲುಕ್ ಕೊಡುತ್ತವೆ. ಉಡುಪಿನೊಂದಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಯೋಗ್ಯವಾದ ಇಂಥ ಆಭರಣ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

■ ಕವಿತಾ ವಿನು ಭಟ್ಟ
ಚಿತ್ರಗಳು: ಸ್ವರ್ಣ ಮಿತ್ರ

ಬಟ್ಟೆಗಳಿಲ್ಲದ ಬದುಕನ್ನು ಊಹೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. 'ಬಟ್ಟೆಗಳಿಲ್ಲದ ಬದುಕು ಮೂರಾಬಟ್ಟೆ' ಎನ್ನುವ ಮಾತನ್ನು ಅನುಸರಿಸಿ ಹುಟ್ಟಿಕೊಂಡ ಹೊಸ ಟ್ರೆಂಡ್ 'ಫ್ಯಾಬ್ರಿಕ್ ಜ್ಯುವೆಲ್ಲರಿ' ಅರ್ಥಾತ್ ಬಟ್ಟೆ ಒಡವೆ. ಹೊಸತನದ ಹುಡುಕಾಟದಲ್ಲಿ ವಿನ್ಯಾಸಕಾರರ ಕೈಚಳಕದಿಂದ ತಯಾರಾದ ಚಂದದ ಬಳೆ, ಸರ, ನೆಕ್ಲೇಸ್, ಕಿವಿಯೋಲೆ, ಪೆಂಡೆಂಟ್‌ಗಳು ಈಗ ಟ್ರೆಂಡ್. ಇಕೊ ಫ್ರೆಂಡ್ಲಿಯಾಗಿದ್ದು ಉಳಿದ ಫ್ಯಾನ್ಸಿ ಒಡವೆಗಳಂತೇ ಚರ್ಮಕ್ಕೆ ಯಾವುದೇ ತರಹದ ಅಲರ್ಜಿ ಉಂಟು ಮಾಡದ ಬಟ್ಟೆಯ ಆಭರಣಗಳನ್ನು ಈಗೀಗ ಫ್ಯಾಷನ್‌ಪ್ರಿಯ ಮಹಿಳೆಯರು ನೆಚ್ಚಿಕೊಂಡಿದ್ದಾರೆ.

ಯಾವುದೇ ಡ್ರೆಸ್ ಧರಿಸಿದರೂ ಅದಕ್ಕೊಂದು ಮ್ಯಾಚಿಂಗ್ ಒಡವೆ ಸೆಟ್ ಬೇಕೆನಿಸುವುದು ಸಹಜ. ಅದೇ ಧರಿಸಿದ ಉಡುಪಿನ ಜವಳಿಯಿಂದಲೇ ಒಡವೆ ತಯಾರಿಸಿದರೆ ಹೇಗೆಂಬ ಸಣ್ಣ ಯೋಚನೆಯೇ ಇಂದು ದೊಡ್ಡ ಪ್ರಮಾಣದ ಮಾರುಕಟ್ಟೆ ಸೃಷ್ಟಿಸಿದೆ. ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ ಒಮ್ಮೆ ಕಣ್ಣಾಡಿಸಿದರೆ ಸಾಕು ನೂರಾರು ವಿಧದ ಫ್ಯಾಬ್ರಿಕ್ ಆಕ್ಸೆಸರೀಸ್ ಕೈಬೀಸಿ ಕರೆಯುತ್ತವೆ.

ನಮ್ಮ ವಾರ್ಡ್‌ರೋಬ್‌ನಲ್ಲಿ ಋತುಮಾನಕ್ಕೆ ತಕ್ಕಂತೆಯೇ ವಿವಿಧ ಬಣ್ಣ ಮತ್ತು ಗುಣಮಟ್ಟದ ಬಟ್ಟೆಗಳಿರುತ್ತವೆ. ಹತ್ತಿ, ನೈಲಾನ್, ರೇಷ್ಮೆ, ಉಣ್ಣೆ, ರೆಯಾನ್, ಸ್ಪ್ಯಾಂಡೆಕ್ಸ್, ಮೈಕ್ರೊಫೈಬರ್, ನಿಯಾನ್, ಜೀನ್ಸ್ ಹೀಗೆ ಪಟ್ಟಿ ಮುಂದುವರಿಯುತ್ತದೆ. ಪ್ಯಾಂಟ್, ಟಾಪ್, ಕುರ್ತಾ, ಸೀರೆ... ಎಲ್ಲ ತರಹದ ಪಾಶ್ಚಾತ್ಯ ಮತ್ತು ಸಾಂಪ್ರದಾಯಿಕ ಬಟ್ಟೆಗಳಿಗೂ ಮ್ಯಾಚಿಂಗ್ ಮಾಡಿಕೊಂಡು ಧರಿಸಬಹುದಾದ ಇಂತಹ ಒಡವೆಗಳು ಮಹಿಳೆಯರಿಗೆ ಇಷ್ಟವಾಗುವುದರಲ್ಲಿ ಸಂಶಯವಿಲ್ಲ.

### ಸುಂದರ ನೆಕ್ಲೇಸ್

ಆಯಾ ಉಡುಪುಗಳಿಗೆ ಅನುಗುಣವಾಗಿ ಮತ್ತು ಆಯ್ಕೆ ಮಾಡಿಕೊಂಡ ಬಟ್ಟೆಯಿಂದ ವೈವಿಧ್ಯಮಯ ನೆಕ್ಲೇಸ್‌ಗಳು ತಯಾರಾಗುತ್ತವೆ. ಫ್ಯಾಬ್ರಿಕ್ ನೆಕ್ಲೇಸ್, ಚೋಕರ್ ಮತ್ತು ಪೆಂಡೆಂಟ್‌ಗಳು ಮಾರುಕಟ್ಟೆಯಲ್ಲಿ ಲಭ್ಯ.

